ಮಧುಕರಿಯೇನಾದರೂ... ಛೆ ಛೇ... ಹಾಗಾಗಿರಲಿಕ್ಕಿಲ್ಲ... ಹೇಳಿದ್ದಲ್ಲಿ, ಹೇಳಿದೆನೆಂದು ನನಗೂ ಹೇಳುತ್ತಿದ್ದ... ಇಷ್ಟೆಲ್ಲ ಯೋಚನೆಗಳ ನಡುವೆಯೇ 'ಅಲೇಕ್ಷ್ಯ... ಅಲೇಕ್ಷ್ಯ... ಏನೋ ಇದೆಲ್ಲ? ನಾನು ನಿನ್ನ ಸ್ನೇಹಿತೆ ಕಣೋ... ನನ್ನೊಡನೆ ಮುಚ್ಚುಮರೆ ಬೇಡ... ಏನೂಂತ ಹೇಳೋ...' ಅಂತಂದು ಒಮ್ಮೆಗೇ ಭೋರ್ಗರೆದೆ.

ಅಲೇಕ್ಷ್ಯ, ನಮ್ಮಿಬ್ಬರನ್ನೂ, ಅಲ್ಲಿಯೇ ಬಾಲ್ಕನಿಯ ಒಂದು ಬದಿಗಿದ್ದ ಬೆಂಚಿನ ಕುಳ್ಳಿರಿಸಿ, ತಾನೂ ಎದುರು ಕುಳಿತ. 'ಯು ನೀಡ್ ಟು ಬಿ ಎಟ್ ಈಸ್, ಸುಮೋದ್... ಸ್ವಲ್ಪ ಸಮಾಧಾನದಲ್ಲಿರು... ಏನೂಂತ ಹೇಳುತೀನಿ...' ಅಂತನ್ನುವಾಗ ಮೈಯೆಲ್ಲ ಕಿವಿಯಾಗಿಕೊಂಡುಳಿದೆ. ಕಾದೆ.

'ಸುಮೋದ್... ನೀನಂದುಕೊಂಡಿರೋ ಹಾಗೆ, ನನಗೆ ಐಕ್ಯಾ ಕುರಿತು ಏನೂ ಗೊತ್ತಿಲ್ಲ ಅಂತೇನಲ್ಲ. ಐ ನ್ಯೂ ಶಿ ವಾಸ್ ಡೀಪ್ಲೀ ಇನ್ ಲವ್ ವಿತ್ ಮಿ... ಅವಳು ನನ್ನನ್ನ ತೀರಾ ಅಬ್ಸೆಸಿವ್ವಾಗಿ ಹಚ್ಚಿಕೊಂಡಿದ್ದಳು ಅನ್ನೋದೂ ನನಗೆ ಗೊತ್ತು... ಚೆನ್ನಾಗಿ ಗೊತ್ತು. ಒಳ್ಳೆಯ ಹುಡುಗಿ... ನಿನಗಿಂತ ಸೊಬಗಿ... ಇಂತಹ ಅವಳಿಗೆ ರೆಸಿಪ್ರೋಕೇಟ್ ಮಾಡುವ ಅಂದರೆ ಅಷ್ಟೆ ಸುಭಗವಾಗಿ ಸ್ಪಂದಿಸೋಕೆ ನನಗೂ ಯಾವುದೇ ಅಭ್ಯಂತರ ಇರಲಿಲ್ಲ... ಆದರೂ ತಡೆದೆ... ಯಾಕೆಂದರೆ, ಅವಳು ಚಿಕ್ಕಂದಿನಿಂದ ನನಗೆ ಗೊತ್ತು... ಅವಳನ್ನ ಬಗುಲಿನಲ್ಲಿ ಕೂರಿಸಿಕೊಂಡು ಓಡಾಡಿದ್ದೆಲ್ಲ ನನಗೆ ನೆನಪಿದೆ... ಹಾಗಾಗಿ ಸರಿಯಲ್ಲ ಅನ್ನಿಸಿತು. ಎಲ್ಲಕ್ಕಿಂತ ನೀನು ನನಗೆ ಪರಮಾಪ್ತ ಗೆಳತಿ... ನನಗೆ ಗೊತ್ತಿರೋ ಹಾಗೆ, ಬೇರೆಯವರಲ್ಲಿ ನಾನು ಹೇಳಿಕೋಬಹುದಾದ್ದನ್ನೆಲ್ಲ ನಿನ್ನಲ್ಲಿ ಚಾಚೂ ತಪ್ಪದೆ ಆಡಿದ್ದೀನಿ. ಹೇಳಿಕೊಂಡಿದ್ದೀನಿ... ಹೀಗಿರುವ ನಿನ್ನ ಮಗಳೊಡನೊಂದು ಮೈ–ಸಂಬಂಧ ಸಾಧ್ಯವಾ ಹೇಳು...'

ಅಲೇಕ್ಷ್ಯ ಆಡಿದವುಗಳಲ್ಲೊಂದೊಂದನ್ನೂ ನನ್ನೊಳಗಿನ ಸಂಪುಟದಲ್ಲಿದ್ದ ಹಳೆಯ ವಿಚಾರಗಳೊಡನೆ ತಾಳೆಯಿಕ್ಕಿಕೊಳ್ಳುತ್ತ ಕೇಳಿಸಿಕೊಂಡೆ. ಆಶ್ಚರ್ಯ ನುಂಗಿಕೊಂಡೆ. ಗೊತ್ತಿರದವುಗಳ ಕುರಿತು ಬೆರಗು ಹೊರಗಿಕ್ಕಿ ಮರುಮರಳಿ ಬೆರಗಾದೆ.

'ಇನ್ ಫ್ಯಾಕ್ಟ್ ನಾನೇ ಐಕ್ಯಾಳನ್ನು ತಡೆದೆ... ಈ ಪರಿಯ ಮೋಹ ಸರಿಯಲ್ಲ, ಮಗೂ ಅಂತಂದೆ... ಅವಳಿಂದ ದೂರವುಳಿದರೆ ಸರಿ ಹೋಗಿಯಾಳು ಅಂದುಕೊಂಡು, ಇಲ್ಲದ ನೆಪವಿಟ್ಟುಕೊಂಡೇ ಯೂಎಸ್ಸಿಗೆ ಹೋದೆ... ಆಮೇಲಿಂದ ಏನಾಯಿತು ಅಂತ ನಿನಗೇ ಗೊತ್ತಿದೆ... ಸರಿ... ವರ್ಷದ ಹಿಂದೆ, ಅಂದರೆ ಅವಳಿಗೆ ಮಕ್ಕಳಾದ ಸಂದರ್ಭದಲ್ಲಿಯೇ ನನಗೆ ಹವ್ವಾ ಸಿಕ್ಕಿದ್ದು... ಏನಾಶ್ಚರ್ಯ ಗೊತ್ತಾ? ಹವ್ವಾ ನನಗೆ ಹತ್ತಿರವಾಗುತ್ತಿದ್ದ ದಿನಗಳಲ್ಲಿಯೇ ಐಕ್ಯಾ ಮತ್ತೆ ನನ್ನ ಸಂಪರ್ಕಕ್ಕೆ ಬಂದಳು. ಫೇಸ್‌ಬುಕ್ಕು, ವಾಟ್ಸಾಪ್ಪು... ದಿನದಿನವೂ ಮೆಸೇಜು... ಹೀಗೆ! ಒಮ್ಮೆ ಯಾವುದೋ ವಿಷಯಕ್ಕೆ, ತಾನು ಕೈಕೊಂಡ ನಿರ್ಧಾರ ಸರಿಯಿಲ್ಲ ಅಂತ ಮೆಸೇಜು ಮಾಡಿದಳು. ಆಶ್ಚರ್ಯ ಆಯಿತು... ಯಾವುದೂಂತ ಯೋಚನೆಯಾಯಿತು. ಕೇಳಲಿಲ್ಲ... ಅದು ಅನಿರುತನನ್ನು ಮದುವೆಯಾದ ವಿಚಾರ ಅಂತ ಆಮೇಲೆ ತಾನಾಗಿಯೇ ತಿಳಿಯಿತು... ನಿಧಾನವಾಗಿ ತಿಳಿಸಿದಳು...'

'....!!'

'ನಾನೇನೂ ಕೆದಕಲಿಲ್ಲ... ಕೆದಕುವ ಸ್ಥಿತಿಯಲ್ಲೂ ನಾನಿರಲಿಲ್ಲ... ಆ ಹೊತ್ತಿಗಾಗಲೇ ನಾನು ಹವ್ವಾಳಿಗೆ ಕಮಿಟ್ಟ್ ಆಗಿಬಿಟ್ಟಿದ್ದೆ! ಹಾಗಾಗಿ ಸುಮ್ಮನಿದ್ದೆ... ಆದರೆ, ಐಕ್ಯಾ ನನ್ನನ್ನು ಸುಮ್ಮಗಿರಗೊಡಲಿಲ್ಲ... ದುಂಬಾಲು ಬಿದ್ದು, ಈ ಪರಿಸ್ಥಿತಿಯಲ್ಲಿ ತಾನೇನು ಮಾಡಬೇಕು ಅಂತ